

# ಅಮೂಲ್ಯ ಹಸಿರು ಗಣಿ

**ಹಸುರು ಬಣ್ಣಕ್ಕೆ ಅನ್ವರ್ಥದಂತಿರುವ ಮರ ಈ 'ಹಸಿರು ಗಣಿ'. ಗಿಣಿ ಹಸುರು ಬಣ್ಣದಿಂದ ಕೂಡಿದ ದಟ್ಟ ಎಲೆಗಳ ಹಂದರದ ಈ ಮರದ ಹೂಗೊಂಚಲುಗಳೆಂದರೆ ಜೇನ್ನೊಣಗಳಿಗೆ ಬಲುಪ್ರೀತಿ.**

**■ ವಿನು ಗಂಗೆ**

ಚಿನ್ನದ ಗಣಿ, ವಜ್ರದ ಗಣಿ ಬಗ್ಗೆ ನಮಗೆಲ್ಲ ತಿಳಿದಿದೆ. ಅದರಂತೆ ಅಮೂಲ್ಯವಾದರೂ ಮಾನವನ ಆದ್ಯತೆಯಲ್ಲಿ ನೇಪಥ್ಯಕ್ಕೆ ಸರಿದ ಇನ್ನೊಂದು ಗಣಿಯ ಕಥೆ ಈ ವಾರದ 'ಮರಗಳ ಕಥೆ'ಯಲ್ಲಿ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಚಿಕ್ಕವಳಿದ್ದಾಗ ಓದಿದ್ದರೂ ಅದರ ಅರ್ಥ ಪರಿಭಾವಿಸಲಾಗಿರಲಿಲ್ಲ. ಉದ್ಯೋಗ, ನೆಲೆ ನೀಡಿರುವ ಪಟ್ಟಣಕ್ಕೆ ನಾವು ಋಣಿಯೇ ಆಗಿದ್ದರೂ ಬೇರುಗಳನ್ನು ಆಗಾಗ ಭದ್ರಪಡಿಸುವುದು ಅತ್ಯಂತ ಅವಶ್ಯಕ ಎಂದೇ ನನ್ನ ಭಾವನೆ. ನಮ್ಮ ಹಿರಿಯರು ಬಾಳಿ ಬದುಕಿದ ಊರಿನ ಭೇಟಿ ನಮ್ಮ ಅಂತಃಶಕ್ತಿ ಉದ್ದೀಪನಗೊಳಿಸುವುದು ಎನ್ನುವುದು ನನ್ನ ಹಾಗೆ ಅನೇಕರ ಅನುಭವವಾಗಿರಬಹುದು. ಒಟ್ಟಿನಲ್ಲಿ ಚಿಕ್ಕವಳಾಗಿದ್ದಾಗಿನಿಂದ ಇದ್ದ ನನ್ನ ಊರಿನ ಆಕರ್ಷಣೆ, ಪದೇ ಪದೇ ಮರಳಿ ಮಣ್ಣಿಗೆ ಎನ್ನುವುದನ್ನು ನನ್ನ ರೂಢಿಯನ್ನಾಗಿಸಿದೆ.

ಪ್ರತಿ ಸಲ ಊರಿಗೆ ಹೋದಾಗಲೂ ಕಾಲುದಾರಿಯಲ್ಲಿ ಒಂದಿಲ್ಲೊಂದು ಹೊಸ ವಿಷಯ ಅನಾವರಣಗೊಳ್ಳುತ್ತದೆ. ಒಂದೇ ವ್ಯತ್ಯಾಸವೆಂದರೆ, ಆಗ ನನ್ನೊಂದಿಗೆ ಗೆಳೆಯ ಗೆಳತಿಯರ ಬಳಗವಿರುತ್ತಿತ್ತು; ಈಗ ಯಜಮಾನರು, ಮಗಳು, ಅತ್ತೆ, ಮಾವ, ಮಕ್ಕಳ ದಂಡು.



ಈ ಸಲ ಊರಿಗೆ ಹೋದಾಗ ಈಗಿನ ಬಳಗದ ಜೊತೆ ತೋಟ ನೋಡಲು ಹೋಗುವಾಗ ಹಸುರು ಎಲೆಗಳಿಂದ ಕಂಗೊಳಿಸುವ ಮರವೊಂದು ಗಮನಸೆಳೆಯಿತು. ಸಾಮಾನ್ಯವಾಗಿ ಎಲ್ಲ ಮರಗಳು ಚಿಗುರುವಾಗ ಕೆಂಪು ಅಥವಾ ತಿಳಿ ಹಸುರು ಬಣ್ಣದ ಎಲೆಗಳನ್ನು ಹೊಂದಿದ್ದು, ಎಲೆಗಳು ಬಲಿಯುತ್ತಾ ಹೋದಂತೆ ಗಾಢ ಹಸುರು ಬಣ್ಣ ಪಡೆಯುತ್ತವೆ. ಆದರೆ ಈ ಮರ ಹಾಗಿರಲಿಲ್ಲ. ಚಿಗುರು ಎಲೆಗಳ ಚಂದದ ಗಿಣಿ ಹಸುರೇ ಬಲಿತ ಎಲೆಗಳ ಬಣ್ಣ ಕೂಡ. ಇದೇ ಈ ಮರದ ವೈಶಿಷ್ಟ್ಯ. ನುಗ್ಗೆ ಎಲೆ ಹೋಲುವ ಎಲೆಗಳಿಂದ ಕಂಗೊಳಿಸುವ ಆ ಮರವನ್ನು 'ಹಸಿರು ಗಣಿ' ಎನ್ನುತ್ತಾರೆ ಎಂದು ಮಾವನವರು ಹೇಳಿದರು. ಸಸ್ಯ ಶಾಸ್ತ್ರಜ್ಞ ಪ್ರೊಫೆಸರ್ ಸಂಪತ್ ಕುಮಾರ್ ಅವರು ತಿಳಿಸಿದ ವೈಜ್ಞಾನಿಕ ಹೆಸರು **Dalbergia Paniculata**, ಮರದ ರೂಪುರೇಷೆಯೊಡನೆ ತಾಳೆ ಹೊಂದಿ ಖಚಿತವಾಯಿತು.

ಹಸಿರು ಗಣಿ ಮರ ನೋಡಿದ ಕೂಡಲೆ ಹಸಿರಿನ ಗಣಿ ಎಂಬ ಭಾವ ಯಾರಲ್ಲಿಯೂ ಮೂಡುವಂತಿರುತ್ತದೆ, ಅಂಥ ಅನ್ವರ್ಥನಾಮ. ಇಡೀ ಮರವೇ ಗಿಣಿ ಹಸುರು ಬಣ್ಣದಿಂದ ಕೂಡಿದ ದಟ್ಟ ಎಲೆಗಳ ಹಂದರ ಹೊಂದಿರುತ್ತದೆ. ಬೀಟೆ ಮರದ (**Dalbergia Latifolia**) ಹತ್ತಿರದ ಸಂಬಂಧಿ. ಬಿಳಿ ಬೀಟೆ, ಮಂಜುಳ ಬೀಟೆ ಎಂಬ ಹೆಸರೂ ಇದೆ.

ಮರದ ತೊಗಟೆ, ನಾಟಾ ಕೂಡ ಬಿಳಿ. ಉಬ್ಬು ತಗ್ಗಿನ ಕಾಂಡದ ಮರ. ಕೆಳಗಿನಿಂದಲೇ ಎಲೆಗಳು ಮೂಡಿರುತ್ತವೆ. ಹೂಗಳು ಹೊಂಗೆ ಹೂವಿನ ಹಾಗೆ, ತೆಳು ನೇರಳೆ ಬಣ್ಣದ ಗೊಂಚಲುಗಳು, ಜೇನು ದುಂಬಿಗಳ ಅಚ್ಚುಮೆಚ್ಚು.

ಮಾವನವರಿಗೆ ಈ ಸಲ ಮಳೆಗಾಲದಲ್ಲಿ ಸಸಿ ಮಾಡಿಕೊಡಲು ವಿನಂತಿಸಿದೆ. ಆದರೆ ಸಸಿ ಹುಟ್ಟಲು ಬೀಜಗಳೇನೂ ಉದುರಿರಲಿಲ್ಲ. ಚಿಕ್ಕ ಮಾವನವರು ಮಳೆಗಾಲದಲ್ಲಿ ಮರದ ಸುತ್ತ ಬೇರಿನಿಂದ ಎದ್ದ ಸಸಿಗಳ ಬೇರನ್ನು ಅಕ್ಕಪಕ್ಕದಲ್ಲಿ ಕತ್ತರಿಸಿ ಒಂದು ತಿಂಗಳು ಬಿಟ್ಟರೆ ಸಸಿಗೆ ಸ್ವತಂತ್ರವಾಗಿ ಬೆಳೆಯಲು ಸಾಮರ್ಥ್ಯ ಬರುತ್ತದೆ, ಆಗ ಸಸಿ ತೆಗೆಯೋದು ಸುಲಭ ಎಂಬ ಉಪಾಯ ಹೇಳಿದರು. ಈ ಹೊಸ ಪ್ರಯೋಗ ಮಾಡಲು ಮಳೆ ಹಿಡಿಯುವುದು ಕಾಯಬೇಕಷ್ಟೆ.

ಬಂಗಾರದ ಗಣಿ, ವಜ್ರದ ಗಣಿಯಂತೆ ಅಮೂಲ್ಯ ಅಕ್ಷಯ ಈ 'ಹಸಿರು ಗಣಿ' ಎಂಬ ಅರಿವು ನಮ್ಮಲ್ಲಿ ಮೂಡುವಂತಾಗಲಿ.

ಪ್ರತಿಕ್ರಿಯಿಸಿ: **feedback@sudha.co.in**